# ವೈಕುಂಠದ ದಾರಿಯಲ್ಲಿ...

■ ಕೆ.ಆರ್. ಸ್ವಾಮಿ

ಅಪ್ಪ ಸತ್ತ ಆರನೇ ದಿನಕ್ಕೆ ಏರ್‌ಮೇಲ್ ಮೂಲಕ ಅಣ್ಣಂದಿರಿಂದ ಬಂದ ಪತ್ರ ನೋಡಿ ಅಚ್ಚರಿಯಾಯಿತು. ಇಬ್ಬರೂ ಒಟ್ಟಿಗೇ ಸೇರಿ ಅದರಲ್ಲಿ ಹೀಗೆ ಬರೆದಿದ್ದರು.

'ನಮ್ಮನ್ನು ಕ್ಷಮಿಸು. ಬಲು ದೂರದಲ್ಲಿದ್ದುದರಿಂದ ಅಪ್ಪನ ಅಂತ್ಯಕ್ರಿಯೆಗೆ ನಮಗೆ ಬರಲಾಗಲಿಲ್ಲ. ವೈಕುಂಠ ಸಮಾರಾಧನೆಗೆ ಖಂಡಿತ ಬಂದೇ ಬರುತ್ತೇವೆ. ಅಪ್ಪನ ಆತ್ಮಕ್ಕೆ ಶಾಂತಿ ಸಿಗಬೇಕು. ಆ ಕಾರ್ಯವನ್ನು ನಮ್ಮ ಗೌರವಕ್ಕೆ ತಕ್ಕಂತೆ ಅದ್ದೂರಿಯಾಗಿ ಮಾಡಬೇಕು. ನಾವೆಲ್ಲಾ ಸೇರಿ ಒಟ್ಟಿಗೇ ಮಾಡಿ ಪುಣ್ಯ ಕಟ್ಟಿಕೊಳ್ಳೋಣ. ಆದರೆ ಆ ಕೊಂಪೆ ಹಳ್ಳಿಯಲ್ಲಿ ಇದನ್ನು ಮಾಡುವುದು ಬೇಡ. ನಮಗೆಲ್ಲ ಅಲ್ಲಿಗೆ ಬಂದು ಹೋಗುವುದು ಕಷ್ಟ. ಬೆಂಗಳೂರಲ್ಲೇ ಮಾಡೋಣ. ಅಲ್ಲಿಗೆ ವಿಮಾನ ಸಂಪರ್ಕ ಇರುವುದರಿಂದ ನಾವೆಲ್ಲಾ ಹೊರದೇಶದಿಂದ ಬಂದು ಬೇಗ ವಾಪಸ್ಸು ಹೋಗಲು ಅನುಕೂಲವಾಗುತ್ತದೆ. ನೀನೂ ಅಲ್ಲಿಗೇ ಬಂದುಬಿಡು'.

ಇಷ್ಟು ವರ್ಷಗಳ ಕಾಲ, ಅಪ್ಪ ಬದುಕಿದ್ದಾನೋ ಸತ್ತಿದ್ದಾನೋ ಎಂದೂ ವಿಚಾರಿಸದ ಈ ಅಣ್ಣಂದಿರು ಈಗ ಇದೆಂತಹ 'ಗೌರವ', 'ಪುಣ್ಯ ಸಂಪಾದನೆ', 'ಶಾಂತಿ' ಎಂಬೆಲ್ಲದರ ಬಗ್ಗೆ ಬರೆಯುತ್ತಿದ್ದಾರೆ? ಅಪ್ಪನ ಬಗ್ಗೆ ಇದ್ದಕ್ಕಿದ್ದಂತೆ ಹೇಗೆ ಪ್ರೀತಿ ಹುಟ್ಟಿಬಿಟ್ಟಿದೆ ಎಂಬುದನ್ನು ನನಗೆ ನಂಬಲಾಗುತ್ತಿಲ್ಲ.

ಅಣ್ಣಂದಿರ ಬಗ್ಗೆ ನನ್ನ ಮನಸ್ಸಿನಲ್ಲಿ ತುಂಬಾ ಬೇಸರವಿದ್ದರೂ ಈಗಲಾದರೂ ಅವರೆಲ್ಲ ಬರುತ್ತಿದ್ದಾರಲ್ಲ ಎಂಬುದೇ ಸಂತಸದ ವಿಷಯ. ಅಣ್ಣ ತಮ್ಮಂದಿರೆಲ್ಲ ಒಟ್ಟಿಗೇ ಸೇರಿ ಕಾರ್ಯ ಮಾಡಿದರೆ ಅಗಲಿದ ಅಪ್ಪನ ಆತ್ಮಕ್ಕೆ ಸತ್ತ ಮೇಲಾದರೂ ಚೂರು ಶಾಂತಿ ಸಿಗಬಹುದು ಎಂದು ನನಗೆ ನಾನೇ ಸಮಾಧಾನ ಮಾಡಿಕೊಂಡೆ.

ಅಪ್ಪನ ಕಾರ್ಯಕ್ಕೆ ನಾನು ಬೆಂಗಳೂರಿಗೆ ಬರಬೇಕೆನ್ನುವುದು ಅಣ್ಣಂದಿರೆಲ್ಲರ ಅಪೇಕ್ಷೆ. ಆದರೆ ನನಗದು ಇಷ್ಟವಿಲ್ಲ. ಹೋಗಬೇಕೋ ಬೇಡವೋ ಎಂದು ಅಳೆದು ತೂಗಿ ಕೊನೆಗೂ ಭಾರವಾದ ಮನಸ್ಸಿನಿಂದ ಬೆಂಗಳೂರಿಗೆ ಹೊರಡುವ ನಿರ್ಧಾರ ಮಾಡಿದೆ. ಕೈಚೀಲದಲ್ಲಿ ಒಂದೆರಡು ಬಟ್ಟೆ ತುಂಬಿಕೊಂಡು ಅದರ ಮೇಲೆ ಓದುತ್ತಿದ್ದ ಆ ಪತ್ರವನ್ನು ಮಡಚಿಟ್ಟು, ನಮ್ಮ ಹಳ್ಳಿಯಿಂದ ಪೇಟೆಯ ಬಸ್‌ಸ್ಟ್ಯಾಂಡ್‌ವರೆಗೂ ನಡೆದು ಬಂದು ಅಲ್ಲಿಂದ ಬೆಂಗಳೂರಿನ ಬಸ್ಸು ಹತ್ತಿಯೇ ಬಿಟ್ಟೆ.

ಅದ್ಯಾಕೋ ಆ ದಿನ ಬೆಂಗಳೂರಿಗೆ ಹೋಗುವ ಆ ಕೆಂಪು ಬಸ್‌ನಲ್ಲಿ ಜನವೋ ಜನ. ತುಂಬಿ ತುಳುಕುತ್ತಿದ್ದ ಆ ರಾತ್ರಿಯ ಬಸ್ಸಿನಲ್ಲಿ ಹಿಂದುಗಡೆ ಒಂದೇ ಒಂದು ಸೀಟು ಮಾತ್ರ ಖಾಲಿ ಇತ್ತು. ಅಲ್ಲಿ ಕೂತರೆ ಉದ್ದಕ್ಕೂ 'ಜಂಪ್' ಆಗುತ್ತದೆ ಎಂದು ಗೊತ್ತಿತ್ತು. ಆದರೆ ಅದೇ ಕಡೆಯ ಬಸ್. ನಾನು ಹೋಗಲೇಬೇಕಾಗಿತ್ತು. ನಿದ್ದೆ ಬಾರದ ನನಗೆ ಯಾವ ಸೀಟ್ ಆದರೇನು? ಕೈಚೀಲವನ್ನು ತಲೆ ಮೇಲಿನ ಲಗೇಜ್ ಕ್ಯಾರಿಯರ್ ಮೇಲಿಟ್ಟು ಟಿಕೆಟ್ ತಗೊಂಡು ಕೂತೆ. ಬಸ್ಸು ಹೊರಟಿತು.

ಆ ಬಸ್ಸಿನ ಕುಲುಕಾಟಕ್ಕಿಂತ ಮನಸ್ಸಿನ ತಾಕಲಾಟವೇ ಮಿತಿಮೀರಿತ್ತು. ನಿದ್ದೆ ಬರುತ್ತಿಲ್ಲ. ನೂರೆಂಟು ಆಲೋಚನೆಗಳು. ಹಳೆಯ ನೆನಪುಗಳೆಲ್ಲಾ ಒಂದರ ಹಿಂದೊಂದರಂತೆ ಸಮುದ್ರದ ಅಲೆಯಂತೆ ಅಪ್ಪಳಿಸುತ್ತಿವೆ.

***

ಅಪ್ಪ ತನ್ನ ಜೀವಿತಾವಧಿಯಲ್ಲಿ ಸಂತೋಷವನ್ನೇ ಕಾಣಲಿಲ್ಲ. ಕಡೆಗಾಲದಲ್ಲಿ ಅದ್ಯಾವುದೋ ಕಾಯಿಲೆಯ ನೋವಿನಿಂದ ನರಳುತ್ತಿದ್ದ. ಪದೇ ಪದೇ ಆಸ್ಪತ್ರೆ, ಮನೆ, ಆಸ್ಪತ್ರೆ ತಿರುಗಾಟದಿಂದ ಕೈಲಿರೋ ದುಡ್ಡು, ದೇಹ ಎರಡೂ ಕ್ಷೀಣವಾಗಿ ಸಣಕಲು ಕಡ್ಡಿಯಾಗಿ ಹೋಗಿದ್ದ. ಅವನ ಜೊತೆಗೆ ನಾನೂ ನರಳುತ್ತಿರುವುದನ್ನು ನೋಡಲು ಅಪ್ಪ ಸುತಾರಾಂ ಇಷ್ಟಪಡುತ್ತಿರಲಿಲ್ಲ.

'ನಾನಂತೂ ಬಿದ್ದು ಹೋಗುವ ಮರ. ನೀನ್ಯಾಕೆ ಕಷ್ಟಪಡುತ್ತಿದ್ದೀ. ಒಂದು ಮದುವೆ ಮಾಡಿಕೊಂಡು ಅಣ್ಣಂದಿರಂತೆ ಸುಖವಾಗಿ ಇದ್ದು ಬಿಡು' ಎಂದು ಪದೇ ಪದೇ ಹೇಳುತ್ತಿದ್ದ. ಅದಕ್ಕೆ ನಾನು 'ನಿನ್ನನ್ನು ಕಷ್ಟದ ಕೂಪಕ್ಕೆ ತಳ್ಳಿ ಅಣ್ಣಂದಿರು ಸುಖವಾಗಿರುವುದನ್ನು ನೀನು ಕಣ್ಣಾರೆ ಕಾಣುತ್ತಿದ್ದೀಯಲ್ಲವೇ...? ಮತ್ತೆ ನಾನೂ ಅದೇ ತಪ್ಪು ಮಾಡಲಾರೆ. ಸಾಯುವವರೆಗೂ ನಿನ್ನನ್ನು ನೋಡಿಕೊಳ್ಳುವುದು ನನ್ನ ಕರ್ತವ್ಯ' ಎಂದು ಖಡಾಖಂಡಿತವಾಗಿ ಹೇಳಿಬಿಟ್ಟಿದ್ದೆ. ಅಪ್ಪ ನನ್ನನ್ನು 'ನೀನು ಈ ಕಾಲದ ಶ್ರವಣಕುಮಾರ' ಎಂದು ಆಗಾಗ ಪ್ರಶಂಸಿಸುತ್ತಿದ್ದ.

ಅವನ ನೆಮ್ಮದಿಯ ಮುಖಾರವಿಂದವನ್ನು ನಾನು ಕಂಡದ್ದು ಆ ದಿನ. ಅವನು ಇಹಲೋಕ ತೊರೆದ ದಿನ. ಅದು ಸ್ಟ್ರೆಚರ್‌ನಲ್ಲಿ ಆಗ ತಾನೇ ಆಸ್ಪತ್ರೆಯಿಂದ ತಂದು ಮನೆಯ ಮುಂದೆ ತಂದಿಟ್ಟಾಗ...

